**ಶೇಖ್ ಮುಜಿಬುರ್ ರೆಹಮಾನ್ ಐತಿಹಾಸಿಕ ನಿವಾಸ ನಾಶದ ಬಗ್ಗೆ ಮಾಧ್ಯಮ ಪ್ರಶ್ನೆಗಳಿಗೆ ಅಧಿಕೃತ ವಕ್ತಾರರ ಪ್ರತಿಕ್ರಿಯೆ**

ಫೆಬ್ರುವರಿ 06, 2025

ಶೇಖ್ ಮುಜಿಬುರ್ ರೆಹಮಾನ್ ಅವರ ಐತಿಹಾಸಿಕ ನಿವಾಸದ ಧ್ವಂಸದ ಕುರಿತು ಮಾಧ್ಯಮ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅಧಿಕೃತ ವಕ್ತಾರ ಶ್ರೀ ರಣಧೀರ್ ಜೈಸ್ವಾಲ್ ಅವರು:

"ಆಕ್ರಮಣ ಮತ್ತು ದಬ್ಬಾಳಿಕೆಯ ಶಕ್ತಿಗಳ ವಿರುದ್ಧ ಹೋರಾಡಿದ ಬಾಂಗ್ಲಾದೇಶದ ಜನರ ವೀರೋಚಿತ ಪ್ರತಿರೋಧದ ಸಂಕೇತವಾದ ಶೇಖ್ ಮುಜಿಬುರ್ ರೆಹಮಾನ್ ಅವರ ಐತಿಹಾಸಿಕ ನಿವಾಸವನ್ನು 2025 ಫೆಬ್ರುವರಿ 5 ರಂದು ನಾಶಗೊಳಿಸಿರುವುದು ವಿಷಾದಕರ.

ಬಾಂಗ್ಲಾದೇಶದ ಗುರುತು ಮತ್ತು ಗೌರವವನ್ನು ಪೋಷಿಸಿದ ಸ್ವಾತಂತ್ರ್ಯ ಹೋರಾಟಕ್ಕೆ ಮೌಲ್ಯ ನೀಡುವ ಎಲ್ಲರಿಗೂ ಬಾಂಗ್ಲಾದೇಶದ ರಾಷ್ಟ್ರೀಯ ಪ್ರಜ್ಞೆಯಾಗಿ ನಿಂತಿರುವ ಈ ನಿವಾಸದ ಮಹತ್ವದ ಬಗ್ಗೆ ತಿಳಿದಿರುತ್ತದೆ.

ಈ ವಿಧ್ವಂಸಕ ಕೃತ್ಯವನ್ನು ಬಲವಾಗಿ ಖಂಡಿಸಬೇಕು" ಎಂದಿದ್ದಾರೆ.

ನವದೆಹಲಿ

ಫೆಬ್ರುವರಿ 06, 2025